# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 797 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೆಂಗಳೂರಿನಿಂದ ಮೈಸೂರು ವರೆಗಿನ ಎಕ್ಸ್‌ಪ್ರೆಸ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡೂ ಬದಿಯಲ್ಲಿ ಶೌಚಾಲಯ, ಉಪಹಾರ ಕೇಂದ್ರ, ವಾಹನ ಬ್ಯಾಟರಿ ಚಾರ್ಜಿಂಗ್ ಸ್ಟೇಷನ್ ವ್ಯವಸ್ಥೆ (ರೆಸ್ಟ್ ಪ್ಲೇಸ್) ಕಲ್ಪಿಸಲಾಗಿರುವ ಸ್ಥಳಗಳು ಯಾವುವು; (ಪೂರ್ಣ ವಿವರ ಗಳೊಡನೆ ಮಾಹಿತಿ ನೀಡುವುದು) | ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ ಹೆದ್ದಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿಯ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. ಸದರಿ ಹೆದ್ದಾರಿಗೆ ಸಂಬಂಧಿಸಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಈ ಕೆಳಕಂಡಂತೆ ವರದಿಸಿರುತ್ತಾರೆ.<br><br>ಬೆಂಗಳೂರು-ಮೈಸೂರು ಹೆದ್ದಾರಿಯ, ಚನ್ನಪಟ್ಟಣ-ರಾಮನಗರ ಬೈಪಾಸ್‌ನಲ್ಲಿ Island Rest area ಗಳ ನಿರ್ಮಾಣಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ರಿಫ್ರೆಷ್‌ಮೆಂಟ್ಸ್, ಟ್ರಕ್ ಲೇ ಬೈ, ಫ್ಯೂಯಲ್ ಸ್ಟೇಷನ್, ಹೆಲಿಪ್ಯಾಡ್, ಪ್ಯಾಟ್ರೋಲಿಂಗ್ ಸ್ಟಾಫ್ ಆಫೀಸ್, ಆಂಬುಲೆನ್ಸ್ ಸ್ಟೇಷನ್ ಏರಿಯಾ, ಪೊಲೀಸ್ ಸ್ಟೇಷನ್, ಇನ್‌ಸ್ಪೆಕ್ಷನ್ ಬಂಗ್ಲೋ, ಟ್ರಕ್ ಡ್ರೈವರ್‌ಗಳಿಗೆ ಶೌಚಾಲಯ ಹಾಗೂ ಸ್ನಾನ ಗೃಹ ಒಳಗೊಂಡಂತೆ ಡಾರ್ಮೆಟರಿ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. |
| ಆ) | ಸದರಿ ದಶಪಥ ರಸ್ತೆಯಲ್ಲಿ ಮಂಡ್ಯ, ಮದ್ದೂರು, ಚನ್ನಪಟ್ಟಣ ಈ ಭಾಗದ ಜನರಿಗೆ ಹೋಗಲು ಮತ್ತು ಬರಲು ಎಲ್ಲೆಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿದೆ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ಬೆಂಗಳೂರು-ಮೈಸೂರು ಹೆದ್ದಾರಿಯ ಯೋಜನೆಯಡಿಯಲ್ಲಿ ಬಿಡದಿ-ರಾಮನಗರ-ಚನ್ನಪಟ್ಟಣ-ಮದ್ದೂರು-ಮಂಡ್ಯ ಮತ್ತು ಶ್ರೀರಂಗಪಟ್ಟಣ ಪಟ್ಟಣಗಳಿಗೆ ಬೈಪಾಸ್ ನಿರ್ಮಿಸಲಾಗಿದ್ದು, ಸದರಿ ಪಟ್ಟಣಗಳಿಗೆ ಪ್ರವೇಶ/ನಿರ್ಗಮಿಸಲು ಬೈಪಾಸ್‌ನ ಪ್ರಾರಂಭ ಹಾಗೂ ನಿರ್ಗಮಿಸುವ ಭಾಗದಲ್ಲಿ ಅವಕಾಶ ಕಲ್ಪಿಸಲಾಗಿದೆ. |
| ಇ) | ಮದ್ದೂರಿನಿಂದ ಶ್ರೀರಂಗಪಟ್ಟಣದ ನಡುವೆ ಎರಡೂ ಬದಿಯಲ್ಲಿ ಕಬ್ಬು ಸರಬರಾಜು ಮಾಡುವ ಎತ್ತಿನಗಾಡಿ ಹಾದು ಹೋಗಲು ಪ್ರತ್ಯೇಕ ಸರ್ವೀಸ್ ರಸ್ತೆ ನಿರ್ಮಿಸಲು ಯೋಜನೆ ರೂಪಿಸಲಾಗಿದೆಯೇ; (ವಿವರ ನೀಡುವುದು) | ಬೆಂಗಳೂರು-ಮೈಸೂರು ಹೆದ್ದಾರಿ ಯೋಜನೆಯ ಉದ್ದಕ್ಕೂ ಸ್ಥಳೀಯ ವಾಹನಗಳ ಸಂಚಾರಕ್ಕಾಗಿ ಮುಖ್ಯ ಕ್ಯಾರೇಜ್‌ವೇ (Main Carriageway) ನ ಎರಡೂ ಬದಿಗಳಲ್ಲಿ ದ್ವಿಪಥದ ಸರ್ವೀಸ್ ರಸ್ತೆಯನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿದ್ದು, ರೈಲ್ವೇ ಓವರ್ ಬ್ರಿಡ್ಜ್ ನಿರ್ಮಿಸುವ ಭಾಗಗಳಲ್ಲಿ ಮಾತ್ರ ಸರ್ವೀಸ್ ರಸ್ತೆಯನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿರುವುದಿಲ್ಲ. |
| ಈ) | ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ಸರ್ವೀಸ್ ರಸ್ತೆ ನಿರ್ಮಿಸಲಾಗಿದೆ; | |

| | | |
|---|---|---|
| ಉ) | ಎಕ್ಸ್‌ಪ್ರೆಸ್ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಯಾವಾಗ ಮುಕ್ತಾಯವಾಗಲಿದೆ; | ಬೆಂಗಳೂರು–ಮೈಸೂರು ಹೆದ್ದಾರಿಯ, ಬೆಂಗಳೂರು–ನೀಡಘಟ್ಟ ಭಾಗದ ಹೆದ್ದಾರಿಯು ಮುಖ್ಯ ಕ್ಯಾರೇಜ್‌ವೇ (Main Carriageway) ಯನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದ್ದು ಸಂಚಾರಕ್ಕೆ ಮುಕ್ತವಾಗಿರುತ್ತದೆ. ಸದರಿ ಭಾಗದ ಕೆಲವೊಂದು ಕಡೆ ಸರ್ವೀಸ್ ರಸ್ತೆ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಮಾರ್ಚ್ 2023ರ ಎರಡನೇ ವಾರಾಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು;<br><br>ಅಲ್ಲದೇ, ನೀಡಘಟ್ಟ – ಮೈಸೂರು ಭಾಗದ ಅಭಿವೃದ್ಧಿ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದ್ದು ಮಾರ್ಚ್–2023ರ ಎರಡನೇ ವಾರಾಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. |
| ಊ) | ಸದರಿ ಕಾಮಗಾರಿ ಸಂಪೂರ್ಣವಾಗಿ ಮುಕ್ತಾಯ ಆಗುವವರೆಗೆ ಸಾರ್ವಜನಿಕರಿಂದ ಯಾವುದೇ ಟೋಲ್ ಹಣವನ್ನು ಸಂಗ್ರಹಿಸದಿರಲು ಸರ್ಕಾರ ಕ್ರಮ ವಹಿಸುವುದೇ? | ಬೆಂಗಳೂರು–ಮೈಸೂರು ಹೆದ್ದಾರಿ ಯೋಜನೆಯಲ್ಲಿ ಪ್ರಸ್ತುತ ಟೋಲ್ ಶುಲ್ಕವನ್ನು ವಸೂಲಾತಿ ಮಾಡಲಾಗುತ್ತಿಲ್ಲ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಭಾರತೀಯ ಸರ್ಕಾರದ ಟೋಲ್ ಶುಲ್ಕ ನೀತಿ ಅನ್ವಯ ಪ್ಯಾಕೇಜ್‌ವಾರು ಟೋಲ್ ಶುಲ್ಕವನ್ನು ವಸೂಲಾತಿ ಮಾಡಲು ಪ್ರಾರಂಭಿಸಲಾಗುವುದು. |

ಕಡತ ಸಂಖ್ಯೆ: ಲೋಇ 62 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು